ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1066
2. ಮಾನ್ಯ ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 21.09.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಮಂಡ್ಯ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು: (ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ ಸರ್ಕಾರಿ ಸ್ವಾಮ್ಯದ 01, ಸಹಕಾರಿ (ಗುತ್ತಿಗೆ) ವಲಯದ 01, ಮತ್ತು ಖಾಸಗಿ ವಲಯದಲ್ಲಿ 03, ಹೀಗೆ ಒಟ್ಟು 05 ಸಕ್ಕರೆ ಕಾರ್ಖಾನೆಗಳಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ. 1. ದಿ ಮೈಸೂರು ಶುಗರ್ ಕಂಪನಿ ಲಿ., ಮಂಡ್ಯ. 2. ಚಾಮುಂಡೇಶ್ವರಿ ಶುಗರ್ಸ್‌ಲಿ, ಭಾರತಿ ನಗರ, ಮದ್ದೂರು ತಾಲ್ಲೂಕು. 3. ಕೋರಮಂಡಲ್ ಶುಗರ್ಸ್‌ಲಿ., ಮಾಕವಳ್ಳಿ, ಕೆ.ಆರ್.ಪೇಟೆ ತಾಲ್ಲೂಕು. 4. ಎಂ.ಆರ್.ಎನ್.ಶುಗರ್ಸ್ ಅಂಡ್ ಬಯೋರಿಫೈನರೀಸ್ ಲಿ., (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗುತ್ತಿಗೆದಾರರು) ಪಾಂಡವಪುರ 5. ಎನ್‌ಎಸ್‌ಎಲ್ (ಎಸ್‌ಸಿಎಂ) ಶುಗರ್ಸ್, ಕೊಪ್ಪ, ಮದ್ದೂರು ತಾಲ್ಲೂಕು ಸರ್ಕಾರಿ ಸ್ವಾಮ್ಯದ ಮೈಸೂರು ಸಕ್ಕರೆ ಕಾರ್ಖಾನೆಯು ಕಳೆದ 2019-20ನೇ ಹಂಗಾಮಿನಿಂದ ಸ್ಥಗಿತಗೊಂಡಿರುತ್ತದೆ.
(ಆ)	ಸದರಿ ಸಕ್ಕರೆ ಕಾರ್ಖಾನೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಬ್ಬು ಸರಬರಾಜು ಮಾಡಿದವರಿಗೆ ಬಾಕಿ ನೀಡಬೇಕಾಗಿರುವ ಮೊತ್ತವೆಷ್ಟು: (ಕಾರ್ಖಾನೆವಾರು ಪ್ರತ್ಯೇಕವಾಗಿ ವಿವರ ನೀಡುವುದು)	ಮಂಡ್ಯ ಜಿಲ್ಲೆಯಲ್ಲಿ 2020-21ನೇ ಹಂಗಾಮಿನಲ್ಲಿ ಕಾರ್ಯನಿರ್ವಹಿಸಿರುವ 04 ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ, ಪಾವತಿಸಿರುವ ಹಾಗೂ ಬಾಕಿ ಇರುವ ಕಾರ್ಖಾನೆವಾರು ವಿವರಗಳನ್ನು ಈ ಕೆಳಕಂಡ ಕೋಷ್ಟಕದಲ್ಲಿ ಒದಗಿಸಿದೆ. (ತಳಗಿನ ಕೋಷ್ಟಕ ನೋಡಿ)

ರೂ.ಕೋಟಿಗಳಲ್ಲಿ

ಕ್ರ. ಸಂ	ಕಾರ್ಖಾನೆಯ ಹೆಸರು/ವಿಳಾಸ	ಪಾವತಿಸಬೇಕಾದ ಮೊತ್ತ	ಪಾವತಿಸಿ-ರುವ ಮೊತ್ತ	ಬಾಕಿ	ಶೇಕಡವಾರು ಪಾವತಿ
1.	ಚಾಮುಂಡೇಶ್ವರಿ ಶುಗರ್ಸ್‌ಲಿ, ಭಾರತಿ ನಗರ, ಮದ್ದೂರು ತಾಲ್ಲೂಕು.	211.68	211.68	0.00	100%
2.	ಕೋರಮಂಡಲ್ ಶುಗರ್ಸ್‌ಲಿ., ಮಾಕವಳ್ಳಿ, ಕೆ.ಆರ್.ಪೇಟೆ ತಾಲ್ಲೂಕು.	177.87	177.87	0.00	100%
3.	ಎಂ.ಆರ್.ಎನ್.ಶುಗರ್ಸ್ ಅಂಡ್ ಬಯೋರಿಫೈನರೀಸ್ ಲಿ., (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗುತ್ತಿಗೆದಾರರು) ಪಾಂಡವಪುರ	43.05	43.41	0.00	101%
4	ಎನ್‌ಎಸ್‌ಎಲ್ (ಎಸ್‌ಸಿಎಂ) ಶುಗರ್ಸ್, ಕೊಪ್ಪ, ಮದ್ದೂರು ತಾಲ್ಲೂಕು	193.01	193.01	0.00	100%

ಎಂ.ಆರ್.ಎನ್.ಶುಗರ್ಸ್ ಅಂಡ್ ಬಯೋರಿಫೈನರೀಸ್ ಲಿ., (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗುತ್ತಿಗೆದಾರರು) ಪಾಂಡವಪುರ – ಈ ಕಾರ್ಖಾನೆಯವರು ಕೇಂದ್ರ ಸರ್ಕಾರವು ನಿಗದಿಪಡಿಸಿದ ಎಫ್.ಆರ್.ಪಿ ದರಕ್ಕಿಂತ ಹೆಚ್ಚಿಗೆ ದರವನ್ನು ರೈತರಿಗೆ ಪಾವತಿಸಿರುತ್ತಾರೆ.

ಕ್ರ.ಸಂ	ಪ್ರಶ್ನೆ	ಉತ್ತರ
(ಇ)	ಬಾಕಿ ಮೊತ್ತ ನೀಡುವಲ್ಲಿ ವಿಳಂಬ ಉಂಟಾಗಲು ಕಾರಣಗಳೇನು:	ಮಂಡ್ಯ ಜಿಲ್ಲೆಯಲ್ಲಿ 2020-21ನೇ ಹಂಗಾಮಿನಲ್ಲಿ ಕಾರ್ಯನಿರ್ವಹಿಸಿರುವ 04 ಸಕ್ಕರೆ ಕಾರ್ಖಾನೆಗಳು ಕಬ್ಬು ಬಿಲ್ಲು ಬಾಕಿಯನ್ನು ಪೂರ್ಣವಾಗಿ ಪಾವತಿಸಿದ್ದು, ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಬಾಕಿ ಇರುವುದಿಲ್ಲ.
(ಈ)	ಬಾಕಿ ಮೊತ್ತ ಪಾವತಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು:	2020-21ನೇ ಹಂಗಾಮಿನ ಕಬ್ಬು ಬಿಲ್ಲು ಬಾಕಿ ಪೂರ್ಣವಾಗಿ ಪಾವತಿಸಿರುವುದರಿಂದ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.
(ಉ)	ಯಾವ ಕಾಲಮಿತಿಯಲ್ಲಿ ಬಾಕಿ ಮೊತ್ತ ಪಾವತಿಸಲು ಸರ್ಕಾರ ಕ್ರಮ ವಹಿಸಲಾಗುವುದು?	

ಸಂಖ್ಯೆ: ಸಿಐ 94 ಎಸ್‌ಜಿಎಫ್ 2021

(ಶಂಕರ ಬ.ಪಾಟೀಲ.ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು